# ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

(ಕರ್ನಾಟಕ ಸರ್ಕಾರದ ನೋಂದಾಯಿತ ಸೊಸೈಟಿ)

# Government Tool Room & Training Centre

**(A Registered Society under Government of Karnataka)**

ಉಲ್ಲೇಖ:ಬೆಂ/2021-22/ತರಬೇತಿ/ಪ.ಕೋ./ 001 ದಿನಾಂಕ:04-11-2022

**ಕಛೇರಿ ಆದೇಶ**

**ವಿಷಯ** : ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಲ್ಲಿ ನಡೆಸಲಾಗುತ್ತಿರುವ DTDM, DPM & DMCH ಕೋರ್ಸಗಳಿಗೆ ಇತ್ತೀಚೆಗೆ ಆಗಸ್ಟ್-ಸೆಪ್ಟಂಬರ್ 2022ರಲ್ಲಿ ಸಮ ಸೆಮಿಸ್ಟರ್ (Regular 2-4-6) ಪರೀಕ್ಷೆಗಳಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಮುಂದಿನ ಸೆಮಿಸ್ಟರ್‌ಗೆ ಬಡ್ತಿ ನೀಡುವ ನಿಯಮಗಳನ್ನು ತಾತ್ಕಲಿಕವಾಗಿ ಬದಲಾಯಿಸುವ ಕುರಿತು

**ಉಲ್ಲೇಖ** : ಮುಖ್ಯ ಪರೀಕ್ಷಕರು-ಪರೀಕ್ಷಾಕೋಶ, ಉಪ-ಪ್ರಧಾನ ವ್ಯವಸ್ಥಾಪಕರು-ಶೈಕ್ಷಣಿಕ ಹಾಗೂ ಉಪ-ಪ್ರಧಾನ ವ್ಯವಸ್ಥಾಪಕರು-ತರಬೇತಿ, ಇವರುಗಳಿಂದ ಮಂಡಿಸಲಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿತವಾಗಿರುವ ಪ್ರಸ್ತಾಪಿತ "ಟಿಪ್ಪಣಿ ಮತ್ತು ಆದೇಶ", ದಿನಾಂಕ 3-11-2022.

**ಮೇಲೆ ಉಲ್ಲೇಖಿಸಿರುವ ಸವಿಸ್ತಾರವಾದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಅನುಮೋದಿಸಿದ್ದು, ಅದರನ್ವಯ ಈ ಕೆಳಕಂಡಂತೆ ಆದೇಶಿಸಲು ನಿರ್ದೇಶಿತನಾಗಿದ್ದೇನೆ.**

- ಆಗಸ್ಟ್-ಸೆಪ್ಟಂಬರ್ 2022ರಲ್ಲಿ ಡಿಪ್ಲೋಮಾ ಕೋರ್ಸ್ ಗಳಿಗೆ ನಡೆಸಲಾದ ಪರಿಕ್ಷೆಗಳಲ್ಲಿ 2 ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದ Regular ವಿದ್ಯಾರ್ಥಿಗಳು 1 ಮತ್ತು 2 ನೇ ಸೆಮಿಸ್ಟರ್‌ಗಳಲ್ಲಿ ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೂ 3 ನೇ ಸೆಮಿಸ್ಟರ್‌ಗೆ ಬಡ್ತಿ ಹೊಂದಲು ಅರ್ಹರಾಗುತ್ತಾರೆ.
- ಆಗಸ್ಟ್-ಸೆಪ್ಟಂಬರ್ 2022ರಲ್ಲಿ ಡಿಪ್ಲೋಮಾ ಕೋರ್ಸ್ ಗಳಿಗೆ ನಡೆಸಲಾದ ಪರಿಕ್ಷೆಗಳಲ್ಲಿ 4 ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದ Regular ವಿದ್ಯಾರ್ಥಿಗಳು 1 ನೇ ಸೆಮಿಸ್ಟರ್‌ನಿಂದ 4 ನೇ ಸೆಮಿಸ್ಟರ್‌ವರೆಗೂ ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೂ 5 ನೇ ಸೆಮಿಸ್ಟರ್‌ಗೆ ಬಡ್ತಿ ಹೊಂದಲು ಅರ್ಹರಾಗುತ್ತಾರೆ.
- ಆಗಸ್ಟ್-ಸೆಪ್ಟಂಬರ್ 2022ರಲ್ಲಿ ಡಿಪ್ಲೋಮಾ ಕೋರ್ಸ್ ಗಳಿಗೆ ನಡೆಸಲಾದ ಪರಿಕ್ಷೆಗಳಲ್ಲಿ 6 ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದ Regular ವಿದ್ಯಾರ್ಥಿಗಳು 1 ನೇ ಸೆಮಿಸ್ಟರ್‌ನಿಂದ 6 ನೇ ಸೆಮಿಸ್ಟರ್‌ವರೆಗೂ ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೂ 1 ವರ್ಷದ ಕೈಗಾರಿಕಾ ತರಬೇತಿ (Inplant Training) ಗೆ ಹೋಗಲು ಅರ್ಹರಾಗುತ್ತಾರೆ.
- 1 ವರ್ಷದ ಕೈಗಾರಿಕಾ ತರಬೇತಿ (Inplant Training) ಯನ್ನು ಮುಗಿಸಿದ ವಿದ್ಯಾರ್ಥಿಗಳು ಕಡ್ಡಾಯವಾಗಿ 1 ನೇ ಸೆಮಿಸ್ಟರ್‌ನಿಂದ 6 ನೇ ಸೆಮಿಸ್ಟರ್ ವರೆಗೂ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾದರೆ ಮಾತ್ರ Viva-Voce ಪರೀಕ್ಷೆಗೆ ಹಾಜರಾಗಲು ಮತ್ತು ಡಿಪ್ಲೋಮಾ ಪ್ರಮಾಣ ಪತ್ರ ಪಡೆಯಲು ಅರ್ಹರಾಗುತ್ತಾರೆ.

ಪ್ರಾಂಶುಪಾಲರು ಮತ್ತು ಉಪ ಕೇಂದ್ರಗಳ ಪ್ರಭಾರ ಅಧಿಕಾರಿಗಳು DTDM, DPM & DMCH ಡಿಪ್ಲೋಮಾ ಕೋರ್ಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಂದಿನ ಸೆಮಿಸ್ಟರ್‌ಗೆ ಬಡ್ತಿ ನೀಡಲು ಮೇಲೆ ತಿಳಿಸಿದ ನಿಯಮಗಳನ್ನು ಅನುಷ್ಠಾನಗೊಳಿಸುವುದು.

**ಪ್ರಮುಖ ಸೂಚನೆ** :ಮುಂಬರುವ ಸಮ ಸೆಮಿಸ್ಟರ್ ಅವಧಿಯ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳಿಗೆ ಈ ತಾತ್ಕಾಲಿಕ "All Subjects Carryover" ನಿಯಮಗಳು ಅನ್ವಯವಾಗುವುದಿಲ್ಲ.

4/11/22

ಮುಖ್ಯ ಪರೀಕ್ಷಕರು-ಪರೀಕ್ಷಾಕೋಶ
ಜಿ.ಟಿ.ಟಿ.ಸಿ, ಬೆಂಗಳೂರು

ಪ್ರತಿಗಳು:

ಉಪ-ಪ್ರಧಾನ ವ್ಯವಸ್ಥಾಪಕರು-ಶೈಕ್ಷಣಿಕ
ಉಪ-ಪ್ರಧಾನ ವ್ಯವಸ್ಥಾಪಕರು-ತರಬೇತಿ
ಪ್ರಾಂಶುಪಾಲರು ಮತ್ತು ಉಪ ಕೇಂದ್ರಗಳ ಪ್ರಭಾರ ಅಧಿಕಾರಿಗಳು